PW2

<u>ಓ.ಎಸ್.ನಂ.931/2025</u>

**ಮೆ॥ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ**
**ಗೋಕಾಕ, ಸ್ಥಳ : ಗೋಕಾಕ**

1] ಶ್ರೀಮತಿ. ಯಲ್ಲವ್ವ ತಂದೆ ಸತ್ತೆಪ್ಪ ಪೂಜೇರಿ

...ವಾದಿ

// ವಿರುದ್ಧ //

1] ಶ್ರೀಮತಿ. ಅಡಿವೆವ್ವಾ ಕೋಂ. ಯಲ್ಲಪ್ಪ ಪೂಜೇರಿ
ಮತ್ತು ಇತರರು

...ಪ್ರತಿವಾದಿಯರು.

NOTARY R.S. Beerannavar Gokak Rev. Taluka District:Belagavi Regd. No.Law/ LCI-213/2025 Exp.16-11-2030 GOVT. OF KARNATAKA

***<u>ಪಿ.ಡಬ್ಲ್ಯೂ-2 ಇವರ ಮುಖ್ಯ ವಿಚಾರಣೆ ಸಾಕ್ಷಿ ಪ್ರಮಾಣ ಪತ್ರ</u>***

ಇದರಲ್ಲಿ ನಾನು ಶ್ರೀಮತಿ. ಗೌರವ್ವ ಕೋಂ. ಯಲ್ಲಪ್ಪ ಕೊಪ್ಪದ, ವಯಸ್ಸು: 35 ವರ್ಷ, ಉದ್ಯೋಗ: ಶೇತ್ಕಿ & ಮನೆಗೆಲಸ, ಸಾ: ತೆಳಗಿನಹಟ್ಟಿ, ತಾ: ಗೋಕಾಕ, ಜಿ: ಬೆಳಗಾವಿ, ಈ ಹೊತ್ತು ಮುಕ್ಕಾಂ ಗೋಕಾಕದಲ್ಲಿ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡುವ ಸಾಕ್ಷಿ ಪ್ರಮಾಣ ಪತ್ರ ಏನೆಂದರೆ:-

1918

1] ನನಗೆ ಸದರಿ ದಾವೆದಲ್ಲಿ ನನಗೆ ವಾದಿ ಮತ್ತು ಪ್ರತಿವಾದಿಯರ ಪರಿಚಯವಿದೆ. ನಾನು ವಾದಿಯ ಖಾಸ ಸಹೋದರಿ ಇದ್ದು, ನನ್ನನ್ನು ತೆಳಗಿನಹಟ್ಟಿ ಗ್ರಾಮದ ಯಲ್ಲಪ್ಪ ಕೊಪ್ಪದ ಇವರ ಮನೆಗೆ ವಿವಾಹ ಮಾಡಿಕೊಟ್ಟಿದ್ದು ಇರುತ್ತದೆ. ಸದರಿ ವಾದಿಯು ದಾವಾ ಆಸ್ತಿಯಲ್ಲಿ ಘೋಷನೆ ಮತ್ತು ಮನಾಯಿ ಕೋರಿ ಪ್ರತಿವಾದಿಯರ ವಿರುದ್ಧ ಈ ದಾವಾ ಮಾಡಿದ್ದು ಇರುತ್ತದೆ. ನನಗೆ ಸದರಿ ದಾವೆದ ಬಗ್ಗೆ ಮಾಹಿತಿ ಇರುವುದರಿಂದ ನಾನು ಈ ಪ್ರಮಾಣ ಪತ್ರ ಮಾಡಲು ಅರ್ಹಳಿರುತ್ತೇನೆ.

2] ನಾನು ಖಾಯಂ ತರೀಖ ಗೋಕಾಕ ತಾಲೂಕ ಪೈಕಿ ತೆಳಗಿನಹಟ್ಟಿ ಗ್ರಾಮದ ರಹವಾಸಿ ಇರುತ್ತೇನೆ. ನನ್ನ ತವರು ಮನೆ ಗೋಕಾಕ ತಾಲೂಕಿನ

No. of CORRECTIONS

ಗೌರವ್ವ ಯಲ್ಲಪ್ಪ ಕೊಪ್ಪದ

ಈರನಟ್ಟಿ ಗ್ರಾಮ ಇದ್ದು ಅದು ಗ್ರಾಮ ಪಂಚಾಯತಿ ಮದವಾಲ ವ್ಯಾಪ್ತಿಯಲ್ಲಿ ಬರುತ್ತದೆ. ನಮ್ಮ ತಂದೆಗೆ ಖುಲ್ಲಾ ಜಾಗೆ ದಾವಾ ಆಸ್ತಿ ಜಿ.ಪಿ.ಸಿ.ನಂ.1328 ಈರನಟ್ಟಿ ಗ್ರಾಮದ ಹದ್ದಿಯ ಗ್ರಾಮ ಪಂಚಾಯತಿ ಮದವಾಲ ಹದ್ದಿಯಲ್ಲಿ ಬರುತ್ತದೆ. ಸದರಿ ಆಸ್ತಿಯನ್ನು ನಮ್ಮ ತಂದೆ ಹಾಗೂ ನಾನು ಹೀಗೆ ಎಲ್ಲರೂ ಕೂಡಿ ವಾದಿಗೆ ಬಿಟ್ಟುಕೊಟ್ಟಿದ್ದು ಇರುತ್ತದೆ. ನಂತರ ಸದರಿ ಆಸ್ತಿಯ ಉತಾರದಲ್ಲಿ ವಾದಿಯ ಹೆಸರು ದಾಖಲಾಗಿದ್ದು ನಿಜವಿರುತ್ತದೆ. ಪ್ರತಿವಾದಿಯರು ದಾವೆದ ಆಸ್ತಿಗೆ ಯಾವುದೇ ರೀತಿ ಸಂಬಂಧ ವಗೈರೆ ಇಲ್ಲದಿದ್ದರೂ ಕೂಡ ಹಾಗೂ ಪ್ರತಿವಾದಿಯರ ಹೆಸರುಗಳು ದಾವೆದ ಆಸ್ತಿಯ ಉತಾರದಲ್ಲಿ ಮತ್ತು ಪಂಚಾಯತ ದಪ್ತರದಲ್ಲಿ ಇಲ್ಲದಿದ್ದರೂ ಕೂಡ ಸದರಿ ಪ್ರತಿವಾದಿಯರು ವಿನಾಕಾರಣ ನಾವು ಮಾಲಿಕರು ಅಂತಾ ವಾದಿಯ ಜೊತೆಗೆ ತಂಟೆ ತಕರಾರು ಮಾಡುತ್ತಿರುವದರಿಂದ ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ಮೆ:: ನ್ಯಾಯಾಲಯದ ಮುಂದೆ ಸಲ್ಲಿಸಿದ್ದು ಇರುತ್ತದೆ. ಕಾರಣ ಸದರಿ ದಾವೆದ ಆಸ್ತಿಗೆ ವಾದಿಯು ಮಾತ್ರ ಸಂಪೂರ್ಣ ಮಾಲಿಕಳು ಮತ್ತು ಹಕ್ಕುದಾರಳು ಇದ್ದು, ಸದರಿ ದಾವೆದ ಆಸ್ತಿಯು ವಾದಿಯ ಕಬ್ಜಾ ವಹಿವಾಟಿಯಲ್ಲಿ ಇರುತ್ತದೆ. ಸದರಿ ಮೇಲೆ ನಮೂದಿಸ ಎಲ್ಲಾ ವಿಷಯಗಳು ಹಾಗೂ ವಾದಿ ಮತ್ತು ದಾವೆದ ಆಸ್ತಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದರಿಂದ ನಾನು ಈ ಸಾಕ್ಷಿ ಪ್ರಮಾಣ ಪತ್ರ ಮಾಡಿರುತ್ತೇನೆ.

ಮೇಲೆ ಹೇಳಿದ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಯಾವತ್ತೂ ಮಜಕೂರು ನನ್ನ ಸ್ವಂತ ವ ಮಾಹಿತಿ ಪ್ರಕಾರ ಬರೆಯಿಸಿದ್ದು ಇದ್ದು, ಅದು ನಿಜವಿರುತ್ತವೆ.

ಸ್ಥಳ: ಗೋಕಾಕ
ದಿನಾಂಕ: 19/08/2026

ಶಪಥವಿಧಿಗಾರಳು

"ಸದರಿಯವರ ಪರಿಚಯವಿದೆ"

[ಎಲ್.ಎಲ್. ಬಿಲ್ಲ]
ವಕೀಲರು ಗೋಕಾಕ

NOTARY
R.S. Beerannavar
Gokak Rev. Taluka
District:Belagavi
Regd. No.Law/
LCL-213/2025
Exp.16-11-2030
GOVT. OF KARNATAKA

Sworn to before me

R. S. BEERANNAVAR
B.Com., LL.B. (Spl.)
ADVOCATE & NOTARY, GOKAK
19 AUG 2026

No. of CORRECTIONS